ದಿನಾಂಕ 08.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು 2ನೇ ಎದುರುದಾರರ ಪರವಾಗಿ ಪರ ಶ್ರೀ. ಹೆಚ್ ಎಸ್ ಬಿ ವಕೀಲರಿಂದಃ**

2015 ವರ್ಷಗಳಿಂದ ಮೃತ ಮನೋಜಕುಮಾರ ರವರು ನಮ್ಮ ಕಂಪನಿಯ ಜೊತೆ ವ್ಯವಹಾರದಲ್ಲಿದ್ದರು. ಪ್ರಾಪ್ತ ವಯಸ್ಕನಾದರೇ ಮಾತ್ರ ಖಾತೆಯನ್ನು ತೆಗೆಯಲು ಅನುಮತಿ ನೀಡುತ್ತೇವೆ ಎಂದರೆ ಸಾಕ್ಷಿಯು ನಮ್ಮ ಬ್ಯಾಂಕನಲ್ಲಿ ಅಪ್ರಾಪ್ತ ವಯಸ್ಕರು ಕೂಡ ಖಾತೆಯನ್ನು ತೆರೆಯಲು ಅವಕಾಶವಿದೆ. ಮೃತ ಮನೋಜ ಕುಮಾರ ಖಾತೆಯನ್ನು ತೆರೆಯುವ ಕಾಲೆಕ್ಕೆ ಆತ ಪ್ರಾಪ್ತ ವಯಸ್ಕ ಅಥವಾ ಅಪ್ರಾಪ್ತ ವಯಸ್ಕನೋ ಎಂದರೆ ಸಾಕ್ಷಿಯು 2015 ರಲ್ಲಿ ಆತ ಖಾತೆ ತೆರೆದಿದ್ದು ನಮ್ಮ ದಾಖಲಾತಿಗಳ ಪ್ರಕಾರ ಆತನ ಜನ್ಮ ದಿನಾಂಕಃ 01.06.1996 ಅಧಾರ ಕಾರ್ಡನಂತೆ, 05.01.1998 ಖಾತೆ ತೆರೆದ ಅರ್ಜಿಯ ಪ್ರಕಾರ. ನಿಪಿ 9 ರ ಕಾಲಂ 22 ರ ಪ್ರಕಾರ ಮೃತ ಮನೋಜ ಕುಮಾರನ ವಾರ್ಷಿಕ ಆದಾಯ 9 ಸಾವಿರ ತೋರಿಸಲಾಗಿದೆ ಎಂದರೆ ಸರಿ. ನಾನು ಹಾಜರು ಮಾಡಿರುವ ನಿಪಿ 10 ರಲ್ಲಿ ಮೃತ ಮನೋಜ ಕುಮಾರ ಯಾವುದೇ ಕಂಪನಿಗಳಿಂದ ಸಂಬಳ ಪಡೆಯುತ್ತಿದ್ದಾನೆ ಎಂದು ತೋರಿಸಲಾಗಿದೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಯಾವುದೋ

ಕಂಪನಿಯವರು ತಮ್ಮಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ಸಂಬಳ ಕೊಡುವ ಸಲುವಾಗಿ ತಮ್ಮ ಕಂಪನಿಯಎ ಖಾತೆ ಹಾಗೂ ಮಾಹಿತಿಗಳನ್ನು ಹಣ ವರ್ಗಾವಣೆ ಮಾಡಲು ನೀಡುತ್ತಾರೆ ಎಂದರೆ ಸಾಕ್ಷಿಯು ಕೆಲವೊಂದು ಕಂಪನಿಗಳು ಮಾಹಿತಿಯನ್ನು ನೀಡುತ್ತಾರೆ ಕೆಲವೊಂದು ಕಂಪನಿಗಳು ಚೆಕ್ಕುಗಳನ್ನು ನೀಡುತ್ತಾರೆ. ಆ ರೀತಿ ಯಾವುದೇ ದಾಖಲಾತಿಗಳನ್ನು ಇಲ್ಲದೇ ಇರುವ ಕಾರಣ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ನಮ್ಮ ಕಡೆ ಇರುವ ದಾಖಲಾತಿಗಳ ಪ್ರಕಾರ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ**
**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.**